## ದುಪ್ಪಟ್ಟು ಶುಲ್ಕ

ತಿಮ್ಮೇಶಿ ತನ್ನ ಮಗನಿಗೆ ಹಲ್ಲು ನೋವೆಂದು ಹಲ್ಲಿನ ವೈದ್ಯರ ಬಳಿಗೆ ಕರೆದೊಯ್ದ. ವೈದ್ಯರು ಅವನನ್ನು ಪರೀಕ್ಷಿಸಿ, ಒಂದು ಹಲ್ಲನ್ನು ಕೀಳಬೇಕೆಂದು, ಅದಕ್ಕೆ ನೂರು ರೂಪಾಯಿ ಶುಲ್ಕವಾಗುತ್ತದೆ ಎಂದು ತಿಳಿಸಿದರು. ಆಗಲಿ ಎಂದ ತಿಮ್ಮೇಶಿ. ಹಲ್ಲು ಕಿತ್ತ ನಂತರ ತಿಮ್ಮೇಶಿ ನೂರು ರೂಪಾಯಿ ಕೊಡಲು ಹೋದ. ವೈದ್ಯರು ಇನ್ನೂರು ರೂಪಾಯಿ ಕೇಳಿದರು. 'ಒಂದು ಹಲ್ಲು ಕೀಳಲು ನೂರು ರೂಪಾಯಿ ಅಂದಿದ್ರಿ ಅಲ್ಲ? ದುಪ್ಪಟ್ಟು ಶುಲ್ಕ ಯಾಕೆ?' ಎಂದ. 'ನಿಮ್ಮ ಮಗನ ಹಲ್ಲು ಕಿತ್ತಿದ್ದಕ್ಕೆ ನೂರು ರೂಪಾಯಿ. ಆದರೆ, ಅವನ ಕಿರುಚಾಟ ಕೇಳಿ ಹೊರಗಿದ್ದ ಒಬ್ಬ ರೋಗಿ ಓಡಿ ಹೋದನಲ್ಲ, ಅವನದ್ದೂ ಸೇರಿ ಇನ್ನೂರು ರೂಪಾಯಿ ಕೊಡಿ' ಎಂದು ಹೇಳಿದರು.

**ಪ.ನಾ. ಹಳ್ಳಿ ಹರೀಶ್ ಕುಮಾರ್**





## ಅಸ್ಥಿಪಂಜರ

ಆ ನರ್ಸಿಂಗ್ ಹೋಂಗೆ ಕಿಟ್ಟು ಪದೇ ಪದೇ ಹೋಗಿ ಕಿರಿಕಿರಿ ಮಾಡುತ್ತಿದ್ದ. ಈ ವಿಷಯ ಡಾಕ್ಟರಿಗೂ ಗೊತ್ತಾಯಿತು. ಅವರು ಮುಂದಾಲೋಚನೆ ಮಾಡಿ, ಅವನು ಬರುವ ಬಾಗಿಲಿಗೆ ಅಸ್ಥಿಪಂಜರವನ್ನು ನೇತು ಹಾಕಿದರು. ಕಿಟ್ಟು ಅದನ್ನು ನೋಡಿ ಹಿಂದಕ್ಕೆ ಹೋಗುವಾಗ, ಡಾಕ್ಟರ್ ಅವನನ್ನು ಕರೆದು ಕೇಳಿದರು. ಆಗ ಕಿಟ್ಟು, 'ಸಾರ್, ನೀವು ಬಟ್ಟೆ ಹಾಕಿಕೊಂಡಿರುವಾಗಲೇ ನಿಮ್ಮನ್ನು ನೋಡೋದಕ್ಕೆ ಇಷ್ಟ ಆಗೋದು, ಹಾಗೆಯೇ ಎಂದೂ ಎದುರಾಗಬೇಡಿ' ಎಂದಾಗ ಡಾಕ್ಟರಿಗೆ ಸುಸ್ತೋ ಸುಸ್ತು!

**ಶಂಕರೇಗೌಡ ತುಂಬಕೆರೆ**